**ಕರ್ನಾಟಕ ಸರ್ಕಾರ**

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/16/ಸಿಎಎಸ್/ಉಬಡ್ತಿ/2015-16/ಬಸ್ಥಾವಿ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:01.08.2017

## ಸುತ್ತೋಲೆ

**ವಿಷಯ** : ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು/ಗ್ರಂಥಪಾಲಕರು/ ದೈಹಿಕ ಶಿಕ್ಷಣ ನಿರ್ದೇಶಕರಿಗೆ ಉನ್ನತ ಎ.ಜಿ.ಪಿ. ಮಂಜೂರು ಮಾಡುವ ಬಗ್ಗೆ.

**ಉಲ್ಲೇಖ** : 1. ಈ ಕಛೇರಿ ದಿನಾಂಕ : 19.05.2015 ರ ಸಂಖ್ಯೆ : ಕಾಶಿಇ/27/ಸಿಎಎಸ್/ ಬಸ್ಥಾವಿ/2010-11ರ ಸುತ್ತೋಲೆ.

2. ಈ ಕಛೇರಿ ದಿನಾಂಕ : 03.10.2015 ಹಾಗೂ 29.10.2015ರ ಸಂಖ್ಯೆ : ಕಾಶಿಇ/16/ಸಿಎಎಸ್/ಉಬಡ್ತಿ/ಬಸ್ಥಾವಿ/2015-16ರ ಸುತ್ತೋಲೆಗಳು.
3. ಸರ್ಕಾರದ ದಿನಾಂಕ : 26.12.2009ರ ಸಂಖ್ಯೆ : ಇಡಿ /37/ಯುಎನ್ಇ/ 2009ರ ಆದೇಶ.
4. ಈ ಕಛೇರಿ ದಿನಾಂಕ : 29.10.2010ರ ಸಂಖ್ಯೆ : ಕಾಶಿಇ/256/ಯುಜಿಸಿ/ ಸಿವಿ-1/2010ರ ಸುತ್ತೋಲೆ.

** ** **

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು/ಗ್ರಂಥಪಾಲಕರು/ದೈಹಿಕ ಶಿಕ್ಷಣ ನಿರ್ದೇಶಕರುಗಳಿಗೆ ರೂ.7000/- ಹಾಗೂ ರೂ. 8000/- ಎ.ಜಿ.ಪಿ. ಮಂಜೂರು ಮಾಡುವ ಸಲುವಾಗಿ ಕಾಲೇಜುಗಳಿಂದ ಪ್ರಸ್ತಾವನೆಗಳನ್ನು ಕಳುಹಿಸಿಕೊಡುವಂತೆ ಉಲ್ಲೇಖ (1) ಹಾಗೂ (2)ರ ಸುತ್ತೋಲೆಗಳಲ್ಲಿ ಸೂಚಿಸಲಾಗಿದೆ ಹಾಗೂ ಸದರಿ ಸುತ್ತೋಲೆಗಳಲ್ಲಿ ಪ್ರಸ್ತಾವನೆಗಳನ್ನು ಕಳುಹಿಸಿಕೊಡುವ ಸಂಬಂಧ ಪ್ರಾಂಶುಪಾಲರ ಹಂತದ ಆಯ್ಕೆ ಸಮಿತಿಯು ಪಾಲಿಸಬೇಕಾದ ಕ್ರಮಗಳ ಬಗ್ಗೆ ವಿವರವಾದ ಸೂಚನೆಗಳನ್ನು ನೀಡಲಾಗಿದೆ. ಆದಾಗ್ಯೂ ಕೆಲವು ಕಾಲೇಜುಗಳಿಂದ ಸ್ವೀಕೃತವಾಗುತ್ತಿರುವ ಪ್ರಸ್ತಾವನೆಗಳು ಅಪೂರ್ಣವಾಗಿದ್ದು ಹಾಗೂ ಕೆಲವು ಪ್ರಸ್ತಾವನೆಗಳು ತಪ್ಪಾದ ಮಾಹಿತಿಯನ್ನು ಒಳಗೊಂಡಿದ್ದು ಇದರಿಂದಾಗಿ ಎ.ಜಿ.ಪಿ. ಮಂಜೂರಾತಿ ಆದೇಶಗಳಲ್ಲಿ ತಿದ್ದುಪಡಿ ಕೋರಿ ಪ್ರಸ್ತಾವನೆಗಳು ಈ ಕಛೇರಿಯಲ್ಲಿ ಸ್ವೀಕೃತವಾಗುತ್ತಿವೆ ಹಾಗೂ ಕೆಲವು ಮಂಜೂರಾತಿ ಆದೇಶಗಳಿಗೆ ಮಹಾಲೇಖಪಾಲರ ಕಛೇರಿಯಿಂದ ಈ ಕೆಳಕಂಡ ಕಾರಣಗಳಾಗಿ ಈ ಕಛೇರಿಯ ಸ್ಪಷ್ಟೀಕರಣವನ್ನು ಕೋರುತ್ತಿದ್ದಾರೆ.

1. ಕೆಲವು ಉಪನ್ಯಾಸಕರು/ಗ್ರಂಥಪಾಲಕರು/ದೈಹಿಕ ಶಿಕ್ಷಣ ನಿರ್ದೇಶಕರು ತಮ್ಮ ಸೇವಾ ಅವಧಿಯಲ್ಲಿ ಕಾಲೇಜಿಗೆ ಗೈರು ಹಾಜರಾಗಿ ಸದರಿ ಅವಧಿಗೆ ಅಸಾಧಾರಣ ರಜೆ/ವೇತನ ರಹಿತ ರಜೆ ಮಂಜೂರು ಮಾಡಿಸಿಕೊಂಡಿದ್ದು ಸದರಿ ಗೈರು ಹಾಜರಿ ಅವಧಿಯನ್ನು ಮುಂದೂಡಿ ಎ.ಜಿ.ಪಿ.ಗೆ ಪ್ರಸ್ತಾವನೆಗಳನ್ನು ಕಳುಹಿಸಿಕೊಡುವ ಬದಲು ಸದರಿ ಅವಧಿಯನ್ನು ಸೇವಾ ಅವಧಿಯೆಂದು ತಪ್ಪು ಮಾಹಿತಿಯನ್ನು ನೀಡಿ ಎ.ಜಿ.ಪಿ. ಮಂಜೂರಾತಿಯನ್ನು ಪಡೆಯುತ್ತಿರುವುದನ್ನು ಮಹಾಲೇಖಪಾಲರು ತಮ್ಮ ಪತ್ರಗಳಲ್ಲಿ ಆಕ್ಷೇಪಣೆಯನ್ನು ವ್ಯಕ್ತಪಡಿಸಿರುತ್ತಾರೆ.
2. ಸೇವಾ ಪುಸ್ತಕದಲ್ಲಿ (ನಮೂನೆ-18 ರಲ್ಲಿ) ನಮೂದಿಸಿರುವ ಹೆಸರನ್ನು ಎ.ಜಿ.ಪಿ. ಪ್ರಸ್ತಾವನೆಯಲ್ಲಿ ನಮೂದಿಸುವಂತೆ ಸೂಚಿಸಲಾಗಿದ್ದರೂ ಸಹ ಸರಿಯಾದ ಹೆಸರನ್ನು ನಮೂದಿಸದೇ ಇರುವುದರಿಂದ ಎ.ಜಿ.ಪಿ. ಮಂಜೂರಾತಿ ಆದೇಶ ಹಾಗೂ ಸೇವಾ ಪುಸ್ತಕದಲ್ಲಿ ನಮೂದಿಸಿರುವ ಹೆಸರುಗಳು ಒಂದಕ್ಕೊಂದು ತಾಳೆಯಾಗುತ್ತಿರುವುದಿಲ್ಲವೆಂದು ಮಹಾಲೇಖಪಾಲರು ಆಕ್ಷೇಪಣೆ ವ್ಯಕ್ತಪಡಿಸಿ ಈ ಬಗ್ಗೆ ಇಲಾಖೆಯ ಸ್ಪಷ್ಟೀಕರಣವನ್ನು ಕೋರುತ್ತಿದ್ದಾರೆ.

3. ಮುಖ್ಯವಾಗಿ ರಾಜ್ಯವೇತನ ಶ್ರೇಣಿಯಲ್ಲಿ ಸೇವಾ ಸಕ್ರಮಗೊಂಡ ಅರೆಕಾಲಿಕ ಉಪನ್ಯಾಸಕರಿಗೆ ಯು.ಜಿ.ಸಿ.ಯವರು ನಿಗದಿಪಡಿಸಿದ ವಿದ್ಯಾರ್ಹತೆಗಳಾದ NET/SLET/Ph.D./M.Phil. ಪದವಿಯನ್ನು ಪೂರೈಸಿದ ದಿನಾಂಕದಿಂದ ಅನ್ವಯವಾಗುವಂತೆ (From the date of acquiring the said qualification) ಯು.ಜಿ.ಸಿ. ವೇತನವನ್ನು ನಿಗದಿಪಡಿಸುವಂತೆ ಉಲ್ಲೇಖ (3) ಹಾಗೂ (4)ರ ಆದೇಶ/ಸುತ್ತೋಲೆಗಳಲ್ಲಿ ಸೂಚಿಸಲಾಗಿದ್ದರೂ ಸಹ ಕೆಲವು ಕಾಲೇಜುಗಳಲ್ಲಿ ಸದರಿ ಉಪನ್ಯಾಸಕರು ಎಂ.ಫಿಲ್. ಪದವಿ ಪರೀಕ್ಷೆಗೆ ಹಾಜರಾದ ದಿನಾಂಕದಿಂದ ಹಾಗೂ ಕೆಲವು ಕಾಲೇಜಿನ ಉಪನ್ಯಾಸಕರಿಗೆ ದಿನಾಂಕ : 01.01.2006 ರಿಂದ ಯು.ಜಿ.ಸಿ. ವೇತನವನ್ನು ನಿಗಧಿಪಡಿಸಿರುವುದನ್ನು ಮಹಾಲೇಖಪಾಲರು ಆಕ್ಷೇಪಿಸಿ ಅಂತಹ ಉಪನ್ಯಾಸಕರು NET/SLET/Ph.D./M.Phil. ಪಡೆದ ದಿನಾಂಕದಿಂದ (Date of Issue of Certificate) ಯು.ಜಿ.ಸಿ. ವೇತನ ಶ್ರೇಣಿಯಲ್ಲಿ ವೇತನವನ್ನು ಪುನರ್ ನಿಗದಿಪಡಿಸಿ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತವನ್ನು ಹಿಂಪಡೆದು ಸೇವಾ ಪುಸ್ತಕಗಳಲ್ಲಿ ನಮೂದಿಸುವಂತೆ ತಿಳಿಸಿರುತ್ತಾರೆ.

ಪ್ರಾಂಶುಪಾಲರ ಹಂತದ ಆಯ್ಕೆ ಸಮಿತಿಯು **ಇನ್ನು ಮುಂದೆ ಎ.ಜಿ.ಪಿ. ಮಂಜೂರಾತಿಗಾಗಿ ಕಳುಹಿಸಿಕೊಡುವ ಪ್ರಸ್ತಾವನೆಗಳಲ್ಲಿ ಮಹಾಲೇಖಪಾಲರ ಕಛೇರಿಯ ಮೇಲ್ಕಂಡ ಸೂಚನೆ/ಆಕ್ಷೇಪಣೆಗಳ ಬಗ್ಗೆ ಗಮನಹರಿಸಿ ಪ್ರಸ್ತಾವನೆಯನ್ನು ಕಳುಹಿಸಿಕೊಡುವಂತೆ ಹಾಗೂ ಪ್ರಸ್ತಾವನೆಯನ್ನು ಕಳುಹಿಸಿಕೊಡುವ ಪೂರ್ವದಲ್ಲಿ ಸಂಬಂಧಿಸಿದ ನೌಕರರ ಸೇವಾ ಪುಸ್ತಕಗಳನ್ನು ತಪ್ಪದೇ ಕೂಲಂಕಷವಾಗಿ ಪರಿಶೀಲಿಸುವಂತೆ ಮತ್ತು ರಾಜ್ಯ ವೇತನ ಶ್ರೇಣಿಯಲ್ಲಿ ಸೇವಾ ಸಕ್ರಮಗೊಂಡ ಉಪನ್ಯಾಸಕರಿಗೆ ಯು.ಜಿ.ಸಿ. ವೇತನ ಶ್ರೇಣಿಯನ್ನು ವಿಸ್ತರಿಸಿರುವ ಆದೇಶದ ಪ್ರತಿ/ಸೇವಾ ಪುಸ್ತಕದಲ್ಲಿ ದಾಖಲಿಸಿರುವ ಪುಟದ ಪ್ರತಿಯನ್ನು ದೃಢೀಕರಿಸಿ ಪ್ರಸ್ತಾವನೆಯೊಂದಿಗೆ ಕಳುಹಿಸಿಕೊಡುವಂತೆ** ಹಾಗೂ ಉಳಿದಂತೆ ಉಲ್ಲೇಖ (1) ಹಾಗೂ (2)ರ ಸುತ್ತೋಲೆಗಳಲ್ಲಿ ಈಗಾಗಲೇ ತಿಳಿಸಿರುವಂತೆ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ,

**ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು**

**ಇವರಿಗೆ:**

ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಮೇಲ್ಕಂಡ ಸುತ್ತೋಲೆಯನ್ನು ತಮ್ಮ ಕಾಲೇಜಿನ ಸಹಾಯಕ ಪ್ರಾಧ್ಯಾಪಕರು/ಗ್ರಂಥಪಾಲಕರು/ದೈಹಿಕ ಶಿಕ್ಷಣ ಬೋಧಕರ ಗಮನಕ್ಕೆ ತರುವಂತೆ ಹಾಗೂ ಇನ್ನು ಮುಂದೆ ಉನ್ನತ ಎ.ಜಿ.ಪಿ.ಗೆ ಪ್ರಸ್ತಾವನೆ ಕಳುಹಿಸುವ ಪೂರ್ವದಲ್ಲಿ ಮೇಲ್ಕಂಡ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಲಾಗಿದೆ.

**ಪ್ರತಿಯನ್ನು :**

1. ಮಾಹಿತಿ ಅಧಿಕಾರಿಗಳು, ಮಾಹಿತಿ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಮೇಲ್ಕಂಡ ಸುತ್ತೋಲೆಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಂಬಂಧದಲ್ಲಿ ಸೂಕ್ತ ಕ್ರಮಕೈಗೊಳ್ಳುವಂತೆ ತಿಳಿಸಲಾಗಿದೆ.
2. ಕಛೇರಿ ಪ್ರತಿ.

*D/New System/Ramu/UGC Guide line 2006/File-16 CAS*